ಮಾಡಬೇಕೆಂದು ಯೋಚನೆ ಮಾಡುತ್ತಿದ್ದಾರೆಂದು ನನಗೆ ತಿಳಿದುಬಂದಿದೆ, ಹೊರ ರಾಜ್ಯದವರು ಇಲ್ಲಿ ಬರುವುದರಿಂದ ಯಾವರೀತಿಯ ಉಪಯೋಗವಾಗುತ್ತದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸ ಬೇಕು ?

ಶ್ರೀ ಕೆ. ಅಮರನಾಥ್ ಶೆಟ್ಟಿ.—ಈ ಶುಲ್ಕ ಏರಿಕೆಯ ಮುನ್ನ ಎಷ್ಟು ಜನ ಯಾತ್ರಿಕರು ಬರುತ್ತಿದ್ದರು. ನಂತರ ಎಷ್ಟು ಜನ ಯಾತ್ರಿಕರು ಬರುತ್ತಿದ್ದಾರೆ ಎನ್ನುವ ಬಗ್ಗೆ ಮಾಹಿತಿ ಇಲ್ಲ ಅವನ್ನು ನಾನು ಒದಗಿಸುತ್ತೇನೆ. ಈ ಕಮಿಟಿಯಲ್ಲಿ ಹೊರ ರಾಜ್ಯದವರನ್ನು ಸೇರಿಸಬೇಕೆಂದು ಅವಕಾಶ ಮಾಡ ಲಾಗಿದೆ, ಆದ್ದರಿಂದ ಹೊರ ರಾಜ್ಯದವರನ್ನು ಸೇರಿಸುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾವಿನಲ್ ಒಂದು ರೂಪಾಯಿ ಇದ್ದುದನ್ನು ಎರಡು ರೂಪಾಯಿಗೆ ಏರಿಕೆ ಮಾಡುವ ಅಗತ್ಯ ಇರಲಿಲ್ಲ. ಈ ರೀತಿ ಏರಿಕೆ ಮಾಡಿದಮೇಲೆ ಯಾತ್ರಿಕರ ಸಂಖ್ಯೆ ಕಡಿಮೆಯಾಗಿದೆಯೇ ? ಇನ್ನು ಹೊರ ರಾಜ್ಯದವರನ್ನು ಇಲ್ಲಿಯ ಸದಸ್ಯರಾಗಿ ನೇಮಕ ಮಾಡುವುದರಿಂದ ನಮ್ಮ ರಾಜ್ಯಕ್ಕೆ ಇದರ ಉಪಯೋಗ ಏನು ? ಆ ರೀತಿ ಕಾನೂನು ಏನಾದರೂ ಇದ್ದರೆ ಅದನ್ನು ಮಾರ್ಪಾಡು ಮಾಡುವ ಬಗ್ಗೆ ಆಲೋಚನೆ ಮಾಡಿ ರಾಜ್ಯದಲ್ಲಿರುವವರನ್ನೇ ನೇಮಕ ಮಾಡುವುದು ಅಗತ್ಯ ಇದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಉತ್ತರ ಹೇಳಬೇಕು.

ಶ್ರೀ ಕೆ. ಅಮರನಾಥ್ ಶೆಟ್ಟಿ.—ಮುಂಚೆ ಆದಾಯ ಬರುವುದಕ್ಕಿಂತಲೂ ಈಗ ಜಾಸ್ತಿ ಆದಾಯ ಬರುತ್ತಿದೆ. ಯಾತ್ರಿಕರ ಸಂಖ್ಯೆಯೂ ಕೂಡ ಕಡಿಮೆಯಾಗಿಲ್ಲ, ಜಾಸ್ತಿಯಾಗಿದೆ. ಇನ್ನು ಹೊರ ರಾಜ್ಯದವರನ್ನು ಏತಕ್ಕೆ ಸೇರಿಸಿದ್ದೀರಿ ಎಂದು ಕೇಳಿದ್ದೀರಿ. ಮುಂದಕ್ಕೆ ಅವರನ್ನು ಸೇರಿಸಬಾರದು ಎನ್ನುವ ಬಗ್ಗೆ ಪರಿಶೀಲಿಸಿ ನೋಡುತ್ತೇವೆ.

ಶ್ರೀ ಬಿ. ಎಸ್ ಯಡಿಯೂರಪ್ಪ.—ವರ್ಷಕ್ಕೆ ಸಂಸ್ಥೆಯಲ್ಲಿ ಹೀಗೆ ದುರುಪಯೋಗ ಆಗುತ್ತಿರುವ ಅನೇಕ ಪ್ರಕರಣಗಳು ಬೆಳಕಿಗೆ ಬಂದಿವೆ. ಈ ರೀತಿಯ ಪ್ರಕರಣಗಳನ್ನು ಕಡಿಮೆ ಮಾಡುವುದಕ್ಕೆ ನೀವು ಏನು ವ್ಯವಸ್ಥೆಯನ್ನು ಮಾಡಿದ್ದೀರಿ ? ಎರಡನೆಯದಾಗಿ ನೀವು ಇವುಗಳಲ್ಲಿ ಪ್ರತಿ ವರ್ಷವೂ ಆಡಿಟ್ ಮಾಡಿಸತಕ್ಕ ವ್ಯವಸ್ಥೆಯನ್ನೇನಾದರೂ ಮಾಡಿದ್ದೀರಾ ?

ಶ್ರೀ ಕೆ ಅಮರನಾಥ್ ಶೆಟ್ಟಿ.—ಮುಜರಾಯಿ ಹಣದಲ್ಲಿ ಸ್ವಲ್ಪ ಹಣವನ್ನು ಮಾತ್ರ ಮುಜರಾಯಿ ಕಮಿಟಿಯ ಖರ್ಚಿಗಾಗಿ ತೆಗೆದುಕೊಳ್ಳುತ್ತೇವೆ. ಇನ್ನುಳಿದ ಹಣವನ್ನು ದೇವಸ್ಥಾನದ ಅಭಿವೃದ್ಧಿಗಾಗಿ ಉಪಯೋಗಿಸುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ ತಮಗೆ ಸಿ ಸಾರಿ ಅವಕಾಶವನ್ನು ಕೊಟ್ಟಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಲ್ಲಿ ಹಣ ದುರುಪಯೋಗವಾಗುತ್ತಿರುವುದರಿಂದ ಹಣದ ಭದ್ರತೆಗಾಗಿ ಪ್ರತಿವರ್ಷ ಆಡಿಟ್ ಮಾಡತಕ್ಕ ವ್ಯವಸ್ಥೆ ಏನಾದರೂ ಇದೆಯೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಕೆ. ಅಮರನಾಥ್ ಶೆಟ್ಟಿ .—ಪ್ರತಿವರ್ಷವೂ ಆಡಿಟ್ ಮಾಡಿಸುತ್ತಿದ್ದೇವೆ.

ಲಂಬಾಣಿ ತಾಂಡಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸುವುದು

೩೪೦. ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಕಂದಾಯ ಪುತ್ರ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಲಂಬಾಣಿ ತಾಂಡಗಳನ್ನು ಹಾಗೂ ಇನ್ನಿತರ ಗ್ರಾಮೀಣ ಜನವಸತಿಗಳನ್ನು ರೆವಿನ್ಯೂ ಗ್ರಾಮಗಳಾಗಿ ಘೋಷಿಸುವುದಾಗಿ ಈ ಹಿಂದೆ ಸರ್ಕಾರವು ಭರವಸೆ ನೀಡಿರುವುದು ನಿಜವಲ್ಲವೇ

ಆ) ಹಾಗಿದ್ದಲ್ಲಿ ಈವರೆವಿಗೂ ಆ ರೀತಿಯ ಘೋಷಣೆ ಹೊರಡಿಸದಿರಲು ಕಾರಣವೇನು.

ಇ) ಶೀಘ್ರವಾಗಿ ಘೋಷಣೆಯನ್ನು ಹೊರಡಿಸುವ ಬಗ್ಗೆ ಸರ್ಕಾರದವರು ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ರಾಜ್ಯದಲ್ಲಿ ಲಂಬಾಣಿ ತಾಂಡಗಳನ್ನು ಪ್ರತ್ಯೇಕ ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಪ್ರಶ್ನೆಯನ್ನು ಪರಿಗಣಿಸಲಾಗುವುದೆಂದು ಸರ್ಕಾರವು ಭರವಸೆ ನೀಡಿರುತ್ತದೆ;

ಆ) ಮತ್ತು ಇ) ಪ್ರಸ್ತಾವನೆಯು ಸರ್ಕಾರದ ತೀವ್ರ ಪರಿಗಣನೆಯಲ್ಲಿರುತ್ತದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸ್ವಾಮೀ ನನಗೆ ತಿಳಿದಂತೆ ಸರ್ಕಾರ ಈ ಹಿಂದೆ ಈ ಬಗ್ಗೆ ''ಪರಿಗಣಿಸಲಾಗುವುದು'' ಎಂದೆಲ್ಲಾ ಭರವಸೆಯನ್ನು ಕೊಟ್ಟಿತ್ತು. ಈ ತಾಂಡಗಳನ್ನು ಪ್ರತ್ಯೇಕ ಕಂದಾಯ ಗ್ರಾಮಗಳನ್ನಾಗಿ "ಪರಿಗಣಿಸಲಾಗುತ್ತದೆ'' ಎಂದು ಸ್ಪಷ್ಟವಾಗಿ ಭರವಸೆಯನ್ನು ಕೊಟ್ಟಿದೆ. ತಪ್ಪಾಗೆ ನಾನು ಈ ಭರವಸೆಯನ್ನು ತಂದು ತೋರಿಸಬಲ್ಲೆ. ಆವರು ಕೊಟ್ಟಿದ್ದ ಭರವಸೆ ನನಗೆ ಸ್ಪಷ್ಟವಾಗಿ ಗೊತ್ತಿದೆ. ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡುವುದಕ್ಕೆ ಏನೇನು ಮಾಡಬೇಕೆಂಬುದು ನಿಮಗೆ ಸೇರಿದ್ದುದು. ಲಂಬಾಣಿಗಳ ನಾಲೆಗಳ ಕೆಲಸಕ್ಕೋಸ್ಕರ, ಕಾರ್ಖಾನೆಗಳಲ್ಲಿ ಕೆಲಸಕ್ಕೋಸ್ಕರ, ಅಥವಾ ಇನ್ನೂ ಬೇರೆ ಬೇರೆ ಕೆಲಸಗಳಿಗೋಸ್ಕರ ಗುಂಪು ಗುಂಪಾಗಿ ವಲಸೆಬರುವುದು ಅಲ್ಲಲ್ಲೇ ತಾಂಡಗಳನ್ನು ಮಾಡಿಕೊಂಡಿರುತ್ತಾರೆ. ಎಲ್ಲೆಲ್ಲಿ ಈ ರೀತಿಯ ಜನ ವಸತಿ ಜಾಗಗಳಿವೆ, ಅಂಥ ಜಾಗಗಳನ್ನು ಗ್ರಾಮಗಳೆಂದು ಪರಿವರ್ತಿಸಲು ಏನು ಕ್ರಮ ತೆಗೆದುಕೊಳ್ಳುತ್ತೀರಿ? ''ಪ್ರಸ್ತಾವನೆಯು ಸರ್ಕಾರದ ತೀವ್ರ ಪರಿಗಣನೆಯಲ್ಲಿರುತ್ತದೆ'' ಎಂದರೆ ಎಷ್ಟು ಕಾಲದಲ್ಲಿ ತಮ್ಮ ನಿರ್ಧಾರವನ್ನು ಪ್ರಕಟಣೆ ಮಾಡುತ್ತೀರಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಇದರ ಬಗ್ಗೆ ಜಿಲ್ಲಾಧಿಕಾರಿಗಳಿಂದ ವರದಿಯನ್ನು ತರಿಸಿದ್ದೇವೆ. ಒಟ್ಟು ೧೧೦೦ ಲಂಬಾಣಿ ತಾಂಡಾಗಳಿವೆ, ೧೩೫೭ ಹ್ಯಾಮ್ಲೆಟ್‌ಗಳಿವೆ. ಇದರಲ್ಲಿ ಒಂದು ಸಮಸ್ಯೆ ಏನಿದೆ ಎಂದರೆ ಲ್ಯಾಂಡ್ ರೆವಿನ್ಯೂ ಆ್ಯಕ್ಟ್ ಪ್ರಕಾರ ಹೊಸದಾಗಿ ರೆವಿನ್ಯೂ ವಿಲೇಜ್ ಎಂದು ಡಿಕ್ಲೇರ್ ಮಾಡಬೇಕಾದರೆ ಆ ಗ್ರಾಮಕ್ಕೆ ಎಷ್ಟು ಜಮೀನು ಇರಬೇಕು ಎಷ್ಟು ಕ್ಷೇತ್ರ ಇರಬೇಕು ಎಂಬುದನ್ನು ನಿಗದಿ ಮಾಡಬೇಕಾಗುತ್ತದೆ. ಆ ಜಮೀನು ಎಲ್ಲಿ ಬರುತ್ತದೆ ಎಂಬುದನ್ನು ಸರ್ವೆ ಮಾಡಬೇಕಾಗುತ್ತದೆ. ನಂತರ ಅದರ ಮ್ಯಾಪ್‌ನ್ನು ತಯಾರು ಮಾಡಬೇಕು, ನಂತರ ಡಿಕ್ಲೇರ್ ಮಾಡಬೇಕಾಗುತ್ತದೆ. ಆಲ್ಲಿಕಾಂಪ್ರಹೆನ್ಸೀವ್ ವರ್ಕ್‌ಇರುತ್ತದೆ.ಇದು ಬಹಳ ಜಟಿಲವಾದ ಪ್ರಶ್ನೆಯಾದ್ದರಿಂದ ಇದನ್ನು ಯಾವರೀತಿ ನಿವಾರಣೆ ಮಾಡಬಹುದೆಂಬುದನ್ನು ನಾವು ಯೋಚನೆ ಮಾಡುತ್ತಿದ್ದೇವೆ. ಇಂಥ ತೊಡಕನ್ನು ನಿವಾರಿಸಿಕೊಳ್ಳಲು ಯೋಚಿಸ ಬೇಕಾಗುತ್ತದೆ. ಇದಕ್ಕೆಲ್ಲಾ ಹಣ ವಿಚಾರಗುತ್ತದೆ ಸಾಕಷ್ಟು ಸಮಯ ಹಿಡಿಯುತ್ತದೆ. ಎಲ್ಲಾ ಜಮೀನು ಒಟ್ಟಿಗೇ, ಒಂದೇಕಡೆ ಇಲ್ಲ. ಅದನ್ನೆಲ್ಲಾ ಸರ್ವೆ ಮಾಡಬೇಕು. ಸರ್ವೆ ಮಾಡದೆ ಕಂದಾಯ ಗ್ರಾಮ ಎಂದು ಡಿಕ್ಲೇರ್ ಮಾಡುವುದಕ್ಕೆ ಬರುವುದಿಲ್ಲ ತಾಂಡಾಗಳನ್ನೆಲ್ಲಾ ಲೆಕ್ಕ ಹಾಕಿ ಯಾವು ಯಾವುದನ್ನು ಯಾವ ಯಾವ ವಿಲೇಜ್‌ಗೆ ಸೇರಿಸಬೇಕೆಂದು ನೋಡಬೇಕು. ಅದಿಲ್ಲದೆ ಎಲ್ಲೆಲ್ಲೋ ಇರತಕ್ಕ ತಾಂಡಾಗಳನ್ನು ಆ ಗ್ರಾಮದ ಜೊತೆಗೆ ಸೇರಿಸುವುದಕ್ಕೆ ಬರುವುದಿಲ್ಲ.

ಶ್ರೀ ಕೆ ಹೆಚ್ ಶ್ರೀನಿವಾಸ್. ತಾವು ಹೇಳುವುದು ಸರಿ. ಸರ್ವೆ ಮಾಡದೇ ಡಿಕ್ಲೇರ್ ಮಾಡಿದರೆ ಅದರಿಂದ ಪ್ರಯೋಜನ ಆಗದೇ ಇರಬಹುದು. ಇದು ಒಂದು ಗ್ರಾಮಕ್ಕೆ ಸಂಬಂಧಪಟ್ಟ ಪ್ರಶ್ನೆ ಅಲ್ಲ. ಮಂಡಲ್ ಪಂಚಾಯತ್ ರಚನೆ ಆದಮೇಲೆ ಆ ಪಂಚಾಯತಿಗಳ ವ್ಯಾಪ್ತಿಗೆ ಎಷ್ಟು ಹಳ್ಳಿಗಳು ಬರಬೇಕು? ಎಷ್ಟು ಜಮೀನು ಬರಬೇಕು ಎಂಬುದನ್ನು ತಿಳಿದುಕೊಳ್ಳಬೇಕಾದರೆ ಸರ್ವೆ ಮಾಡಬೇಕೆಂದು ಹೇಳುತ್ತಿದ್ದೀರಿ. ಮಂಡಲ ಪಂಚಾಯಿತಿಯವರೂ ಕೂಡ ತಮ್ಮ ವ್ಯಾಪ್ತಿಗೆ ಎಷ್ಟು ಕ್ಷೇತ್ರ ಬರುತ್ತದೆಂಬುದನ್ನು ಸರ್ವೆ ಮಾಡಬೇಕೆಂದು ಹೇಳುತ್ತಿದ್ದಾರೆ. ಈ ಕೆಲಸವನ್ನು ಎಂದಾದರೂ ನೀವು ಮಾಡಲೇಬೇಕಾಗಿದೆ. ಆದ್ದರಿಂದ ಈಗಲೇ ತಾವು ಈ ಎರಡು ಕೆಲಸಗಳನ್ನೂ ಒಟ್ಟಿಗೆ ಮಾಡಿದರೆ ಒಳ್ಳೆಯದು. ತಾವು ಸರ್ವೆ ಮಾಡಬೇಕಾದರೆ. ಮ್ಯಾಪ್ ತಯಾರಿಸಬೇಕಾದರೆ ಅದಕ್ಕೆ ಬೇಕಾದ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕೆಲ್ಲಾ ಕಾಲಾವಕಾಶ ಬೇಕಾಗುತ್ತದೆ. ಅದಕ್ಕೆ ಬದಲಾಗಿ ಷಾರ್ಟ್ ಕಟ್ ಮೆಥಡ್ ಏನಾದರೂ ಇದೆಯೇ ಎಂಬುದನ್ನು ತಾವು ಹುಡುಕಬೇಕು. ಈ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ —ತಾವು ಕೇಳಿರತಕ್ಕಂಥ ಪ್ರಶ್ನೆ ಬಹಳ ಗಂಭೀರವಾಗಿದೆ. ಈ ರೀತಿ ಡಿಕ್ಲೇರ್ ಮಾಡಿದ್ದರೆ ಲೀಗಲ್ ಆಗಿ ಏನಾಗುತ್ತದೆ ಎನ್ನುವುದನ್ನು ವಿಚಾರ ಮಾಡುತ್ತೇನೆ.

ಮತ್ತು ಆದಷ್ಟು ಜಾಗ್ರತೆ ಸರ್ವೆ ಮಾಡಿಸುತ್ತೇನೆ. ಏನಾದ್ರೂ ವಿಲೇಜ್ ಎಂದು ಡಿಕ್ಲೇರ್ ಮಾಡಲು ಕಾನೂನು ಬದಲಾವಣೆ ಮಾಡುವುದಕ್ಕೆ ಅವಕಾಶವಿದ್ದರೆ ಅದನ್ನು ಕೂಡ ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೇ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಒಂದೇ ವಿಲೇಜ್ ಎರಡು ತಾಲ್ಲೂಕುಗಳಿಗೆ ಸೇರಿರುತ್ತದೆ. ನೆಲ್ಲೂರೂ ತಾಲ್ಲೂಕಿಗೂ ಸೇರಿದೆ ಮತ್ತು ಕಂಪ್ಲಿಗೂ ಸೇರಿದೆ. ಆದ್ದರಿಂದ ಇದನ್ನು ಒಂದೇ ತಾಲ್ಲೂಕಿಗೆ ಸೇರಿಸಲು ಬರುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಮ್ಮ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

ಸಹಕಾರಿ ರಂಗದಡಿಯಲ್ಲಿರುವ ಒಟ್ಟಿಗಿರಣಿಗಳು

೭೪೪. ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಕೈಗಾರಿಕಾ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಹಕಾರಿ ಕ್ಷೇತ್ರದಲ್ಲಿ ಬರುವ ಜವಳಿ ಗಿರಣಿಗಳು ತೀವ್ರವಾದ ಆರ್ಥಿಕ ಬಿಕ್ಕಟನ್ನು ಮತ್ತು ಹತ್ತಿಯ ರಂಗಗಳಲ್ಲಿ ವಿರೋಧಿತಗಳನ್ನು ಎದುರಿಸುತ್ತಿರುವುದು ನಿಜವೇ?

ಆ) ಬಿಜಾಪುರ ಮತ್ತು ರಾಯಚೂರು ಗಿರಣಿಗಳು ಆಡಳಿತಾಧಿಕಾರಿಯಿಂದ ನಡೆಸಲ್ಪಡುತ್ತಿರುವುದು ನಿಜವೇ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳು.

ಇ) ಆ ಗಿರಣಿಗಳನ್ನು ಸಹಕಾರಿ ಕ್ಷೇತ್ರಕ್ಕೆ ಮರಳಿ ಒಪ್ಪಿಸುವ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳು.

ಈ) ಆ ಗಿರಣಿಗಳನ್ನು ಪುನರುಜ್ಜೀವನಗೊಳಿಸಲು ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮವು ಒದಗಿಸುವ ರೂ. ೫೦.೦೦ ಲಕ್ಷ ಮಾರ್ಜಿನ್ ಮನಿ ಸೌಲಭ್ಯವನ್ನು ಸರ್ಕಾರವು ಪಡೆದಿದೆಯೇ?

ಉ) ಹಾಗಿದ್ದಲ್ಲಿ ತಡವಾಗಿರುವುದಕ್ಕೆ ಕಾರಣಗಳು.

ಶ್ರೀ ಆರ್. ಬಿ. ಪೋತ್‌ದಾರ್ (ಕೈಗಾರಿಕಾ ಸಹಕಾರ ಮಂತ್ರಿಗಳು).—

ಅ) ನಿಜ.

ಆ) ನಿಜ. ಬಿಜಾಪುರ ಮತ್ತು ರಾಯಚೂರು ಸಹಕಾರಿ ನೂಲಿನ ಗಿರಣಿಗಳ ಆಡಳಿತ ಮಂಡಳಿಗಳು ಗಂಭೀರ ಸ್ವರೂಪದ ಅಕ್ರಮಗಳನ್ನು ಎಸಗಿದ್ದರಿಂದ, ರಾಯಚೂರು ಸಹಕಾರಿ ನೂಲಿನ ಗಿರಣಿಗೆ ಆಡಳಿತಾಧಿಕಾರಿಗಳನ್ನು ಮತ್ತು ಬಿಜಾಪುರ ಸಹಕಾರಿ ನೂಲಿನ ಗಿರಣಿಗೆ ವಿಶೇಷಾಧಿಕಾರಿಗಳನ್ನು ನೇಮಿಸಲಾಗಿದೆ.

ಇ) ಸದ್ರಿ ನೂಲಿನ ಗಿರಣಿಗಳನ್ನು ಕರ್ನಾಟಕ ರಿಲೀಫ್ ಅಂಡರ್‌ಟೇಕಿಂಗ್ (ಸ್ಪೆಷಲ್ ಪ್ರಾವಿಷನ್) ಆಕ್ಟ್ ೧೯೭೭ರ ಅನ್ವಯ ರೋಗಗ್ರಸ್ತ ಘಟಕಗಳನ್ನಾಗಿ (ಸಿಕ್ ಯುನಿಟ್ಸ್) ಸಾರಿದ್ದು, ಆಡಳಿತಾಧಿಕಾರಿ/ವಿಶೇಷಾಧಿಕಾರಿಗಳ ಆಡಳಿತದಲ್ಲಿ ಸದರಿ ಗಿರಣಿಗಳನ್ನು ನಡೆಸಲಾಗುತ್ತಿದೆ.

ಈ) ಇಲ್ಲ.

ಉ) ಎರಡೂ ನೂಲಿನ ಗಿರಣಿಗಳು ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮವು ಮಾರ್ಜಿನ್ ಮನಿ ಸೌಲಭ್ಯ ಕೊಡುವಾಗ್ಗೆ ವಿಧಿಸಿದ ಷರತ್ತುಗಳನ್ನು ನೆರವೇರಿಸಲೇ ಇದ್ದುದರಿಂದ ಮತ್ತು ಅವು ಅತಿಯಾದ ಹಾನಿಯಲ್ಲಿ ನಡೆಯುತ್ತಿರುವುದರಿಂದ.

(ಶ್ರೀ ಆರ್. ಬಿ. ಪೋತ್‌ದಾರ್, ಕೈಗಾರಿಕಾ ಸಹಕಾರಿಗಳ ಸಚಿವರು ಪ್ರಶ್ನೆ ಮತ್ತು ಉತ್ತರವನ್ನು ಓದುತ್ತಿರಬೇಕಾದರೆ ಪ್ರೇಕ್ಷಕರ ಗ್ಯಾಲರಿಯಿಂದ ಪೋತದಾರ್‌ರವರಿಗೆ ಧಿಕ್ಕಾರ, ರಾಮಾಕೃಷ್ಣ ಹೆಗಡೆ ಯವರಿಗೆ ಜಯವಾಗಲಿ ಎಂದು ಕೂಗುತ್ತಾ, ಒಬ್ಬ ವ್ಯಕ್ತಿ ಒಂದು ಚೀಟಿಯನ್ನು ಎಸೆದನು)

ಅಧ್ಯಕ್ಷರು.—ಯಾರು ಗಲಾಟೆ ಮಾಡಬಾರದು.